ಓ.ಎಸ್ಃ 194/2013

ಪಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 25.07.2023 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ. ಎಂ.ಎಸ್ ವಕೀಲರಿಂದ</u>**

ಚನ್ನಪ್ಪ ಮತ್ತು ಲಕ್ಷ್ಮಮ್ಮ ಏನು ತಕರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ. ಚನ್ನಪ್ಪ ನಾನು ದಾವೆ ಹೂಡುವ ಸಮಯದಲ್ಲಿ ವಾದಪತ್ರದಲ್ಲಿ ನಮೂದಿಸಿರುವ ವಂಶವೃಕ್ಷ ಸರಿಯಿಲ್ಲ ಎಂದು ತಕರಾರಿನಲ್ಲಿ ಹೇಳಿರುತ್ತಾರೆ ಎಂದರೆ ಸರಿ. ಬೊಮ್ಮಯ್ಯ ನನಗೆ ತಾತನಾಗಬೇಕು. ಬೊಮ್ಮಯ್ಯನಿಗೆ ಮೊದಲನೆ ಹೆಂಡತಿ ಸಾಕಮ್ಮ ಎರಡನೇ ಹೆಂಡತಿ ಪುಟ್ಟಮ್ಮ ಎಂದರೆ ಸರಿ. ಮೊದಲನೆ ಹೆಂಡತಿ ಸಾಕಮ್ಮನಿಗೆ ಪುಟ್ಟಮ್ಮ ಎಂಬ ಮಗಳಿದ್ದರು ಅವರು ಮರಣ ಹೊಂದಿರುತ್ತಾರೆ. ಸದರಿ ಪುಟ್ಟಮ್ಮನಿಗೆ ಕೆಂಪಮ್ಮ ಎಂಬ ಮಗಳಿದ್ದಳು ಎಂದರೆ ತಿಳಿದಿಲ್ಲ. 2ನೇ ಹೆಂಡತಿ ನಿಂಗಮ್ಮನಿಗೆ ಜಯಮ್ಮ, ಚಿಕ್ಕತಾಯಮ್ಮ, ಚನ್ನಮ್ಮ ಮತ್ತು ಶಾಂತಮ್ಮ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಬಸವೇಗೌಡ ಮಾತ್ರ ನನ್ನ ತಂದೆ. ಬಸವೇಗೌಡನ ಹೆಂಡತಿ ನನ್ನ ತಾಯಿ ಪಾರ್ವತಮ್ಮ ಎಂದರೆ ಸರಿ. ಪಾರ್ವತಮ್ಮನಿಗೆ ಪೂರ್ಣಿಮ, ಲಕ್ಷ್ಮಿ, ನಾಗಲಕ್ಷ್ಮಿ, ಸರಳ ಮತ್ತು ಸುವರ್ಣ ಮಕ್ಕಳು ಎಂದರೆ ಸರಿ. ವೇಣುಗೋಪಾಲ, ಶಿವಕುಮಾರ ಮತ್ತು ಚಿತ್ರಾವತಿ ಚನ್ನಪ್ಪನ ಮಕ್ಕಳು ಎಂದರೆ ಸರಿ. ದಾವ ಸ್ವತ್ತು ಗಂಜಾಂನಲ್ಲಿರುತ್ತದೆ. ದಾವ ಸ್ವತ್ತನ್ನು ಹೊರತುಪಡಿಸಿ ಬೇರೆ ಜಮೀನು ಇದ್ದವು ಅದನ್ನು ಮಾರಾಟ ಮಾಡಿರುತ್ತಾರೆ. ಮಾರಾಟ ಮಾಡಿರುವ ಸ್ವತ್ತನ್ನು ಈ

ದಾವೆಯಲ್ಲಿ ಸೇರಿಸಿಲ್ಲ. ದಾವ ಸ್ವತ್ತುಗಳು ಗುತ್ತಿಗೆ ಸ್ವತ್ತುಗಳು ಎಂದರೆ ಸರಿ. ನನಗೆ ಮದುವೆಯಾಗಿ ಸುಮಾರು 30 ವರ್ಷ ಆಗಿರುತ್ತದೆ. ದಾವ ಸ್ವತ್ತುಗಳನ್ನು ಚನ್ನಪ್ಪನ ತಂದೆ ಬೊಮ್ಮಯ್ಯ ಗುತ್ತಿಗೆ ಪಡೆದುಕೊಂಡಿದ್ದ ಜಮೀನುಗಳು ಎಂದರೆ ಸರಿ. ಅವರ ಹೆಸರಿಗೆ ಹಕ್ಕುಪತ್ರ ನೀಡಿರುತ್ತಾರೆ ಎಂದರೆ ಸರಿ.

ಸಾಕ್ಷಿಗೆ ಗೇಣಿದಾರರಾಗಿ ನೊಂದಣಿಯಾಗಿರುವ ಬಗ್ಗೆ ಗೇಣಿ ದೃಡೀಕರಣ ಪತ್ರ ನಮೂನೆ-10 ನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ಗೇಣಿ ದೃಡೀಕರಣ ಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. ಗುತ್ತ ಮೊಬಲಗನ್ನು ಸರ್ಕಾರಕ್ಕೆ ಪಾವತಿಸಿರುವ ಬಗ್ಗೆ ರಶೀದಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ಬೊಮ್ಮಯ್ಯ ರವರು ದಾವ ಸ್ವತ್ತನ್ನು ಅವರ ಮಕ್ಕಳಾದ ಬಸವೇಗೌಡ ಮತ್ತು ಚನ್ನಪ್ಪ ರವರಿಗೆ ದಿನಾಂಕ 08.06.1984 ರಂದು ಮರಣ ಉಯಿಲು ಬರೆದಿರುತ್ತಾರೆ ಎಂದರೆ ಸರಿ. ಬೊಮ್ಮಯ್ಯ ರವರು ದಿ. 01.05.1987 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ವಿಲ್ ನಂತೆ ಚನ್ನಪ್ಪ ಖಾತೆ ಮಾಡಿಸಿಕೊಂಡು ಅನುಭವದಲ್ಲಿ ವ್ಯವಸಾಯ ಮಾಡುತ್ತಿರುತ್ತಾರೆ ಎಂದರೆ ಸರಿ. ಚನ್ನಪ್ಪ ಸರ್ವೆ ನಂ. 719 ದಾವ ಐಟಂ ನಂ. 3 ನ್ನು 2 ನೇ ಪ್ರತಿವಾದಿಗೆ ವಿಲ್ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ನಿಂಗಮ್ಮ ಜೀವಿತಾ ಕಾಲದಲ್ಲಿ ಅನಾರೋಗ್ಯಕ್ಕೆ ಒಳಗಾಗಿದ್ದು ಸರ್ವೆ ನಂ. 562/3 ರಲ್ಲಿ 32 ಗುಂಟೆ ಜಮೀನನ್ನು

ದಿ. 24.07.1997 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಆ ಬಗ್ಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ